# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 741(950). |
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ). |
| ಉತ್ತರಿಸಬೇಕಾದ ದಿನಾಂಕ | : | 24-08-2026. |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಆದೇಶ ಸಂಖ್ಯೆ:ED 522 TPU 90 ಬೆಂಗಳೂರು ದಿನಾಂಕ:09-07-1992 ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದ್ದು ಪ್ರಸ್ತುತ ಚಾಲ್ತಿಯಲ್ಲಿದೆಯೇ; ಚಾಲ್ತಿಯಲ್ಲಿದ್ದರೆ, ಯಾವ ಕಾರಣಕ್ಕಾಗಿ ಉಪನ್ಯಾಸಕರಿಗೆ ಸೀನಿಯರ್ ಲೆಕ್ಚರರ್, ಸೆಲೆಕ್ಷನ್ ಗ್ರೇಡ್ ಲೆಕ್ಚರರ್ ಆಗಿ ಪದೋನ್ನತಿ ನೀಡುತ್ತಿಲ್ಲ; (ಸಂಪೂರ್ಣವಾದ ಮಾಹಿತಿ ನೀಡುವುದು) | ಸರ್ಕಾರಿ ಆದೇಶ ಸಂಖ್ಯೆ: ED 522 TPU 90 ದಿನಾಂಕ: 09-07-1992 ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಆದೇಶವಾಗಿದ್ದು, ಇಲಾಖೆಗೆ ಪ್ರತ್ಯೇಕವಾಗಿ ವೃಂದ ಮತ್ತು ನೇಮಕಾತಿ ನಿಯಮಗಳು ಅಸ್ತಿತ್ವದಲ್ಲಿ ಇಲ್ಲದೇ ಇರುವ ಸಂದರ್ಭದಲ್ಲಿ ಹೊರಡಿಸಲಾದ ಆದೇಶವಾಗಿರುತ್ತದೆ.<br><br>ನಂತರ ಸರ್ಕಾರದ ಆದೇಶ ಸಂಖ್ಯೆ :ಡಿಪಿಎಆರ್ 71 ಎಸ್ಆರ್ಇ 94 ದಿನಾಂಕ: 27-05-1998 ರಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಪೂರ್ಣ ಪ್ರಮಾಣದ ವೃಂದ ಮತ್ತು ನೇಮಕಾತಿ ನಿಯಮಗಳು ಜಾರಿಗೆ ಬಂದಿರುತ್ತದೆ. ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ಹುದ್ದೆಯನ್ನು ಒಂದು ಏಕ ವೃಂದ (Single Cadre) ಎಂದು ಪರಿಗಣಿಸಲಾಗಿದ್ದು, ಉಪನ್ಯಾಸಕರ ವೃಂದದೊಳಗೆ Senior Lecturer ಅಥವಾ Selection Grade Lecturer ಎಂಬ ಪ್ರತ್ಯೇಕ ಪದೋನ್ನತಿ ವೃಂದಗಳನ್ನು ಪ್ರತ್ಯೇಕವಾಗಿ ನಿರ್ಧರಿಸಿರುವುದಿಲ್ಲ. ಆದ್ದರಿಂದ, ಉಪನ್ಯಾಸಕರ ವೃಂದವು ಏಕ ವೃಂದವಾಗಿರುವ ಹಿನ್ನೆಲೆಯಲ್ಲಿ ಸದರಿ ವೃಂದದಲ್ಲಿ ಸೇವೆ ಸಲ್ಲಿಸುತ್ತಿರುವ ಉಪನ್ಯಾಸಕರಿಗೆ ಅನ್ವಯವಾಗುವ ಕಾಲಮಿತಿ ವೇತನ ಬಡ್ತಿ, ಸ್ವಯಂಚಾಲಿತ ವೇತನ ಬಡ್ತಿ ಹಾಗೂ ಆಯ್ಕೆ ಶ್ರೇಣಿ/ಆಯ್ಕೆಕಾಲಿಕ ವೇತನ ಬಡ್ತಿಗಳನ್ನು ಅವರ ಮೂಲ ವೃಂದವಾದ ಉಪನ್ಯಾಸಕರ ಹುದ್ದೆಯಲ್ಲಿಯೇ ಮಂಜೂರು ಮಾಡಲಾಗುತ್ತದೆ. |
| ಆ) | 10 ವರ್ಷದ ಕಾಲಮಿತಿ ಬಡ್ತಿ ಮತ್ತು 20 ವರ್ಷದ ಹೆಚ್ಚುವರಿ 1ನೇ ವೇತನ ಬಡ್ತಿಗೆ ಸಂಬಂಧಿಸಿದಂತೆ ಸುರೇಂದ್ರನಾಥ ವರದಿ ಹಾಗೂ ಸರ್ಕಾರಿ ಆದೇಶ ಸಂಖ್ಯೆ: ED 522 TPU 90ಗೆ ಇರುವ ಸಂಬಂಧವೇನು? (ಸಂಪೂರ್ಣವಾದ ಮಾಹಿತಿ ನೀಡುವುದು) | ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿನ ಕಾಲೇಜುಗಳಲ್ಲಿನ ಸಿಬ್ಬಂದಿಗಳ ಬೇಡಿಕೆಗಳನ್ನು ಪರಿಶೀಲಿಸುವ ಸಲುವಾಗಿ ಶ್ರೀ ಕೆ.ಪಿ. ಸುರೇಂದ್ರನಾಥ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ, ಸಮಿತಿಯು ದಿನಾಂಕ: 27-05-1989ರಂದು ಸಲ್ಲಿಸಿದ್ದ ವರದಿಯಲ್ಲಿ ಶಿಕ್ಷಣ ಇಲಾಖೆಯ ಆಯುಕ್ತರು, ವರದಿಯಲ್ಲಿನ ಸಲಹೆಗಳನ್ನು ಜಾರಿಗೊಳಿಸುವಂತೆ ಕೋರಿದ್ದ ಹಿನ್ನೆಲೆಯಲ್ಲಿ ಪದವಿ ಪೂರ್ವ ಶಿಕ್ಷಣ ವಿಭಾಗಕ್ಕೆ ಸಂಬಂಧಿಸಿದ ಆಡಳಿತಾತ್ಮಕ ನಿಯಂತ್ರಣ ಹಾಗೂ ಸಿಬ್ಬಂದಿ/ಹುದ್ದೆಗಳ ಕುರಿತು ಕೆಲವು ಬೇಡಿಕೆಗಳನ್ನು ಅಂಗೀಕರಿಸಿ ಸರ್ಕಾರದ ಆದೇಶ ಸಂಖ್ಯೆ: ED 522 TPU 90 ದಿನಾಂಕ: 09-06-1992ರ ಮೂಲಕ ಆದೇಶ ಹೊರಡಿಸಿರುತ್ತದೆ. |

| | | |
|---|---|---|
| | | 10 ವರ್ಷದ ಕಾಲಮಿತಿ ವೇತನ ಬಡ್ತಿಯು ಸರ್ಕಾರದ ಪ್ರತ್ಯೇಕ ಕಾಲಮಿತಿ ವೇತನ ಬಡ್ತಿ/ವೇತನ ಪರಿಷ್ಕರಣೆ ಸಂಬಂಧಿತ ಆದೇಶಗಳು ಹಾಗೂ ನಿಯಮಗಳ ಆಧಾರದ ಮೇಲೆ ಮಂಜೂರು ಮಾಡಲಾಗುವ ವೇತನ ಸೌಲಭ್ಯವಾಗಿದೆ. ಅದೇ ರೀತಿ, 20 ವರ್ಷಗಳ ಸೇವೆಯ ನಂತರ ನೀಡಲಾಗುವ ಹೆಚ್ಚುವರಿ 1ನೇ ವೇತನ ಬಡ್ತಿಯೂ ಪ್ರತ್ಯೇಕ ಸರ್ಕಾರದ ಆದೇಶದಡಿ ನಿಗದಿಪಡಿಸಲಾದ ಅರ್ಹತೆ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ.<br><br>ಶ್ರೀ ಕೆ ಪಿ ಸುರೇಂದ್ರನಾಥ ಸಮಿತಿ ವರದಿ ಮತ್ತು ED 522 TPU 90ರ ನೇರ ಸಂಬಂಧವು ಪದವಿ ಪೂರ್ವ ಶಿಕ್ಷಣ ಇಲಾಖೆಯ ಆಡಳಿತಾತ್ಮಕ ವ್ಯವಸ್ಥೆ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಸ್ಥಾಪನೆ/ನಿಯಂತ್ರಣ ಹಾಗೂ ಸಂಬಂಧಿತ ಸಿಬ್ಬಂದಿ ಮತ್ತು ಹುದ್ದೆಗಳ ವ್ಯವಸ್ಥೆಗೆ ಸಂಬಂಧಿಸಿದೆ. |

ಸಂಖ್ಯೆ: ಇಪಿ 264 ಡಿಜಿಡಬ್ಲ್ಯೂ 2026.

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.